ಹಪಹಪಿಸುತ್ತಿದ್ದೆ. ಥಟ್ಟನೆ ತನ್ನ ದೇಹಸಿರಿಯ ಕಾರಣಕ್ಕೇ ಅವಳು ನನ್ನ ಕಲ್ಪನೆಗೆ ಹೆಚ್ಚೆಚ್ಚು ಬರುತ್ತಿದ್ದಾಳೆ ಅಂತ ಅರಿವಾಗಿ ಪಾಪಪ್ರಜ್ಞೆ ಜಾಗೃತವಾಗಿ ಎಷ್ಟೋ ಸಲ ನಿದ್ದೆ ಸೋತು ಏಳುತ್ತಿದ್ದೆ. ಆದರೆ ಮದುವೆಯಾಗಿ, ಮಕ್ಕಳನ್ನು ಕಂಡು ಕರಿ ಹೆರಳಿನ ಮಧ್ಯೆ ಬಿಳಿ ನೆರಳು ಮೂಡಿದವನಾದ ನನಗೆ ಕ್ರಮೇಣ ಆ ನೆನಪುಗಳೆಲ್ಲಾ ತೀರಿಹೋದವು. ಅದಾದಮೇಲೆ ಸುಮಾರು ಇಪ್ಪತ್ತು ವರ್ಷಗಳ ಕಾಲ ನಾನು ವಿಶ್ವ – ಸುರಭಿಯ ಜಗತ್ತಿನಾಚೆ ಹಬ್ಬಿ ಹೋಗಿದ್ದೆ.

ಅಂಥ ಸಂದರ್ಭದಲ್ಲಿ ನನ್ನನ್ನು ಅಲುಗಿಸಲು ಬಂದ ಕತೆ ಇದು.

ಹಾಗಿದ್ದರೆ ವಿಶ್ವಜಿತ್ ಈ ಕತೆಯನ್ನು ಹೇಗೆ ಬರೆದ, ವಿಶ್ವಜಿತ್‌ಗೆ ಇದೆಲ್ಲಾ ಗೊತ್ತಿತ್ತೇ? ಗೊತ್ತಿದ್ದೇ ಮದುವೆಗೂ ಕರೆದಿದ್ದನೇ? ಮದುವೆ ನಂತರವೂ ಯಾಕೆ ವಿಶ್ವಜಿತ್ ನನ್ನ ಭೇಟಿ ಮಾಡಲು ಬಯಸಲಿಲ್ಲ? ಹಾಗಿದ್ದರೆ ವಿಶ್ವಜಿತ್ ಇಪ್ಪತ್ತು ವರ್ಷಗಳಿಂದ ಈ ಒಂದು ಅವಕಾಶಕ್ಕಾಗಿ ಕಾದಿದ್ದನೇ? ಇದನ್ನು ಕಥೆಯ ರೂಪದಲ್ಲಿ ಬರೆದಮೇಲೆಯೂ ಅವನು ಏನನ್ನು ಸಾಧಿಸಲಿದ್ದಾನೆ? ನನ್ನ ಪಾಪಪ್ರಜ್ಞೆಯನ್ನು ಕೆಣಕುವುದಷ್ಟೇ ಅವನ ಉದ್ದೇಶವಾಗಿದೆಯೇ? ಇಷ್ಟೆಲ್ಲದರ ನಡುವೆ ಸುರಭಿ ಮನಸ್ಸಲ್ಲಿ ಏನು ನಡೆಯುತ್ತಿದೆ? ಇಂಥ ದೊಡ್ಡ ಸತ್ಯವನ್ನು ತಮ್ಮ ಮಧ್ಯೆ ಇಟ್ಟುಕೊಂಡು ಪ್ರತಿರಾತ್ರಿ ಮಲಗುವವರಿಗೆ ಮಗ್ಗುಲನ್ನು ಚುಚ್ಚುವಂಥ ಈ ಮುಳ್ಳಿನ ತೀವ್ರತೆಯಾದರೂ ಎಂಥಹದಿದ್ದೀತು? ಇದು ಹೆಚ್ಚು ನೋವು ಕೊಟ್ಟಿರುವುದು ವಿಶ್ವಜಿತ್‌ಗಾ, ಸುರಭಿಗಾ? ಸುರಭಿ ತನ್ನ ಪಾಪಪ್ರಜ್ಞೆ ಕಳೆದುಕೊಳ್ಳಲೇ ಈ ಸತ್ಯವನ್ನು ಒಪ್ಪಿಕೊಂಡಿದ್ದಾಳಾ? ಆ ಸತ್ಯವನ್ನು ಅರಗಿಸಿಕೊಳ್ಳಲಾಗದೇ ಕತೆಯ ರೂಪದಲ್ಲಿ ವಿಶ್ವಜಿತ್ ಬರೆದಿದ್ದಾನಾ? ಇದೆಲ್ಲಾ ತನಗೆ ಗೊತ್ತಾಗಬೇಕು ಅಂತಲೇ ಕತೆಯೊಳಗೆ ಆ ಗುಟ್ಟನ್ನಿಟ್ಟು ಸಂಕಲನ ಕಳಿಸಿಕೊಟ್ಟನಾ? ಓದಿದ್ದೇನಾ ಅಂತ ಖಚಿತಪಡಿಸಿಕೊಳ್ಳಲು 'ಓದಿದೆಯಾ' ಅಂತ ಮೆಸೇಜು ಹಾಕಿದನಾ?

> ಫೇಸ್‌ಬುಕ್, ಸ್ಟೇಟಸ್ಸು, ಎಡ, ಬಲ, ಸುರಭಿಗಿರುವ ಫೇಸ್‌ಬುಕ್ ಭಯ, ಅವಳ ಅನಾಮಧೇಯತೆಯ ಆಸೆ ಎಲ್ಲವನ್ನೂ ಹೇಳುತ್ತಾ ಹೇಳುತ್ತಾ ಇನ್ನಷ್ಟು ಹೆಚ್ಚು ಆತ್ಮೀಯನಾಗುತ್ತಾ ಹೋದ ಹಾಗೆ ನನಗೆ ಜ್ವರವೇ ಬಂದ ಹಾಗಾಯಿತು. ಕಾರ್ಡು ಕೊಟ್ಟು, ಬಿಲ್ಲು ತೆತ್ತು ಹೊರಡಲು ಪಾರ್ಕಿಂಗಿಗೆ ಬಂದಾಗ ಅಲ್ಲಿ ಒಂದು ಬಗೆಯ ವಿಚಿತ್ರ ಕತ್ತಲೆ, ಮೌನವಿತ್ತು.

ಹಾಗಿದ್ದರೆ ತಾನು ನಲುಗಿಸಿದ ಸುರಭಿಯನ್ನು ಅವಳನ್ನು ಪ್ರೀತಿಸುವ ವಿಶ್ವಜಿತ್ತನೇ ಮದುವೆ ಆದ ಅಂತ ಗೊತ್ತಾದಾಗಲೂ ತನಗೆ ಯಾಕೆ ಪಾಪಪ್ರಜ್ಞೆ ಕಾಡಲಿಲ್ಲ?

ಪಾಪಪ್ರಜ್ಞೆ ಯಾವತ್ತಿದ್ದರೂ ಅವಳ ಸ್ವತ್ತೇ?

ಈ ಪಾಪಪ್ರಜ್ಞೆಗೆ ಲಿಂಗಭೇದ ಇದೆಯೇ, ಇಲ್ಲವೇ?

ಅಥವಾ ಬಯಸಿದ್ದನ್ನು ಬಳಸಿಕೊಳ್ಳುವುದು ಅಷ್ಟು ಮನುಷ್ಯಸಹಜವಾದ್ದೇ?

ಮಗ್ಗುಲಲ್ಲಿ ಇದ್ಯಾವುದೂ ಅರಿಯದ ಯಶೋದಾ ನಿದ್ದೆ ಹೋಗಿದ್ದಾಳೆ, ಪಕ್ಕದಲ್ಲೇ ರಾಹುಲ.

★★★